# ಶಿವಣ್ಣ ನಾಟಿ ಔಷಧಿ ಖಯಾಲಿ

ಶ್ರೀಕೆ ಎಂದರು, 'ಹೌದು... ನೀವಂದಂತೆ ಹುಡ್ಗಿ ಇನ್ನೂ ಚಿಕ್ಕದು... ತಾಯಿಗೂ ಬಿಟ್ಟಿರೋದು ಕಷ್ಟ. ಆದ್ರೆ ನನಗನ್ನಿಸುತ್ತೆ, ಹುಡುಗೀಗೆ ಸಣ್ಣ ದೋಷ ಇರಬಹುದು. ಅದನ್ನು ಸರಿಪಡಿಸಲು ಆದಷ್ಟು ಬೇಗ ತಕ್ಕ ಶಿಕ್ಷಣವನ್ನ ಪರಿಣಿತರಿಂದ ಕೊಡಿಸಿದರೆ ಒಳ್ಳೇದು... ಯಾವುದಕ್ಕೂ ಇಲ್ಲಿಯೇ ಯಾರಾದ್ರೂ ಮನೋವೈದ್ಯರಿಗೆ ತೋರ್ಸಿದರೆ ವಾಸಿ... ಮಿದುಳಿನ ದೋಷ ಇದ್ದರೆ ಅವರು ಹೇಳ್ತಾರೆ...'

ಪ್ರಸಾದನಿಗೆ ಭಟ್ಟರು ತಗ್ಗಿದ ದನಿಯಲ್ಲಿ ಅಂದರು,

'ಏನು ಪ್ರಸಾದ... ಬರೀ ಇದೇ ಪುರಾಣ ಆಗಿ ಹೋಯ್ತಲ್ಲೋ...! ಮನೆ ರಿಪೇರಿ ವಿಷ್ಯ ಹಾಗೇ ಉಳೀತಲ್ಲೋ...'

'ಹೇಳೋಣ ಅಪ್ಪಾ... ಇರಿ' ಎನ್ನುತ್ತಾ ಎದುರಿನ ಕಿಟಕಿ ಬಳಿ ನಡೆದ. ಆ ಕಿಟಕಿಯ ಪರದೆ ಸರಿಯಾಗಿ ಹಾಕಿರದಿದ್ದರಿಂದ ಬಿಸಿಲು ಮುಖಕ್ಕೇ ಬೀಳುತ್ತಿತ್ತು. ಅದಕ್ಕಾಗಿ ಅವನು ಪರದೆ ಸರಿ ಮಾಡುತ್ತಿದ್ದಾಗ 'ಪಾಪು' ಬಂದು ನಿಂತದ್ದನ್ನು ಗಮನಿಸಿದ. ಅದು ಯಾವ ಮಾಯದಲ್ಲೋ ಆ ಪುಟ್ಟ ಹುಡುಗಿ ತಾಯಿಯ ಬಳಿಯಿಂದ ಪ್ರಸಾದನ ಬಳಿಗೆ ಓಡಿ ಬಂದು ಅವನ ಕೈ ಹಿಡಿದು ತನ್ನ ಕೆನ್ನೆ ಬಳಿ ಇಟ್ಟುಕೊಂಡಳು.' ಅವನೂ ಆ ಮಗುವಿನ ಕೈಯನ್ನು ತಳ್ಳದೇ, ಮೃದುವಾಗಿ ಅವಳ ದುಂಡು ಗುಲಾಬಿ ಕೆನ್ನೆಯನ್ನು ಸವರಿಬಿಟ್ಟ! ಮಕ್ಕಳನ್ನು ಸ್ಪರ್ಶಿಸುವಾಗ ಉಂಟಾಗುವ ನಿಶ್ಕಲ್ಮಶ ಭಾವ ಸ್ವರ್ಗ ಸುಖವನ್ನೇ ಕೊಡುತ್ತದೆ. ಆ ಒಂದು ಅನುಭವ ಅವನಿಗಾಯಿತು. ಅದರ ಪರಿಣಾಮ ಅವನಿಗೆ ಕೋಣೆಯಲ್ಲಿ



ವಿಜಯ